

بسم الله الرّحمٰن الرّحيم

# ಪಾಕಿಸ್ತಾನದ ಪಂಜಾಬ್‌ನಲ್ಲಿ ಅಹ್ಮದಿಯಾ ಪತ್ರಿಕೆ ಮತ್ತು ಗ್ರಂಥಗಳ ಮೇಲೆ ನಿರ್ಬಂಧ ಹೇರಿಕೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**15-05-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಸರಕಾರ ನಮ್ಮ ಜಮಾಅತಿನ ಕೆಲವು ಪತ್ರಿಕೆಗಳ ಮೇಲೆ ಮತ್ತು ಗ್ರಂಥಗಳ ಮೇಲೆ ನಿರ್ಬಂಧ ಹೇರಿದ ವಿಷಯ ನಾನು ಕಳೆದ ವಾರದ ಖುತುಬದಲ್ಲಿ ಹೇಳಿದ್ದೆ. ಇವುಗಳನ್ನು ಪ್ರಕಾಶನ ಮಾಡುವುದು ಅಥವಾ ಡಿಸ್‌ಪ್ಲೇ ಮಾಡುವುದು ನಿರ್ಬಂಧಿಸಲಾಗಿದೆ. ಇದರ ಬಗ್ಗೆ ಅಲ್ಲಿನ ಪತ್ರಿಕೆಗಳು ಸಹ ವರದಿ ಮಾಡಿವೆ. ಇಂದಿನ ಕಾಲದಲ್ಲಿ ಫೋನ್ ಮೂಲಕ ವಿವಿಧ ರೀತಿಯ ಚಿತ್ರ ಮತ್ತು ಮೆಸೇಜ್‌ಗಳನ್ನು ಕಳುಹಿಸಲು ಸಾಧ್ಯವಿದೆ. ಕ್ಷಣಮಾತ್ರದಲ್ಲಿ ವಾರ್ತೆಗಳು ಲೋಕದಾದ್ಯಂತ ಪ್ರಕಟವಾಗುತ್ತವೆ. ನನಗೆ ಕೆಲವರು ಫ್ಯಾಕ್ಸ್ ಮತ್ತು ಪತ್ರಗಳ ಮೂಲಕ ತಮ್ಮ ಚಿಂತೆಯನ್ನು ಸೂಚಿಸಿದ್ದಾರೆ. ನಾವು ನೆನಪಿಡಬೇಕಾದುದೇನೆಂದರೆ ಇಂತಹ ವಿಷಯಗಳು ಹೊಸದೇನೂ ಅಲ್ಲ. ಅಹ್ಮದಿಯಾ ಜಮಾಅತ್ ಸ್ಥಾಪಿತವಾದ ಆರಂಭದಿಂದಲೇ ವಿರೋಧಿಗಳು ಹೀಗೆ ಮಾಡುತ್ತಿದ್ದರು. ಇನ್ನು ಮುಂದೆ ಸಹ ತಮ್ಮ ಕೆಲಸ ಅವರು ಮುಂದುವರಿಸುವರು. ಅವರ ಈ ಕೃತ್ಯಗಳಿಂದ ಜಮಾಅತಿಗೆ ಹಿಂದೆ ಹಾನಿಯೇನೂ ಸಂಭವಿಸಲಿಲ್ಲ. ಇನ್‌ಶಾಅಲ್ಲಾಹ್, ಮುಂದೆ ಸಹ ಯಾವ ಹಾನಿಯೂ ಸಂಭವಿಸದು. ಜಮಾಅತಿಗೆ ಹಾನಿ ಉಂಟುಮಾಡಲು ಅವರಿಂದ ಸಾಧ್ಯವಿಲ್ಲ.. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದೈವಿಕ ದೌತ್ಯವನ್ನು ತಡೆಯಬಲ್ಲ ಒಂದು ಶಿಶುವಿಗೆ ಯಾವ ತಾಯಿಯೂ ಜನ್ಮ ನೀಡಿಲ್ಲ. ಈ ತಥಾಕಥಿತ ಮತಪಂಡಿತರಿಗೆ ಮತ್ತು ಅವರ ಕಡೆಗೆ ನೋಡುತ್ತಿರುವ ಸರಕಾರಗಳಿಗೆ ಅಹ್ಮದಿಯಾ ಜಮಾಅತಿನ ಅಭಿವೃದ್ಧಿಯನ್ನು ಕಂಡು ತಮ್ಮ ಅಸೂಯೆಯನ್ನು ಪ್ರಕಟಪಡಿಸಲು ಯಾವುದಾದರೊಂದು ನೆಪದ ಆವಶ್ಯಕತೆ ಇತ್ತು. ಈ ಅಸೂಯೆ ಅವರನ್ನು ಎಷ್ಟು ಅಂಧರನ್ನಾಗಿ ಮಾಡಿದೆ ಎಂದರೆ ಅವರ ಬುದ್ಧಿಗೆ ಪೂರ್ಣವಾಗಿ ಪರದೆ ಬಿದ್ದಿದೆ. ಬಾಹ್ಯವಾಗಿ ವಿದ್ಯಾವಂತರೆಂದು ಕಾಣಿಸುತ್ತಿರುವ ಇವರು ಅಜ್ಞಾನಿಗಳಿಗಿಂತ ಹೆಚ್ಚು ಮೌಢ್ಯರಾಗಿ ಅಭಿಪ್ರಾಯ ಪ್ರಕಟಿಸುತ್ತಾರೆ. ಅವರು ಸತ್ಯವನ್ನು ತಿಳಿಯಲು ಪ್ರಯತ್ನ ಮಾಡಲೇ ಇಲ್ಲ. ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವ್ಯ ಸ್ಥಾನವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಗೆ ವಿವರಿಸಿದರು ಮತ್ತು ಅಹ್ಮದಿಯಾ ಜಮಾಅತಿನ ಸಾಹಿತ್ಯಗಳಲ್ಲಿ ಇವುಗಳನ್ನು ಎಷ್ಟು ಸುಂದರವಾಗಿ ನಿರೂಪಿಸಲಾಗಿದೆ ಎಂದು ತಿಳಿಯಲು ಅವರು ಪ್ರಯತ್ನಿಸಲೇ ಇಲ್ಲ. ಆದರೆ, ನ್ಯಾಯಪ್ರಿಯರಾದ ಮುಸ್ಲಿಮರು ಅರಬರಲ್ಲೂ ಬೇರೆ ಜನಾಂಗಗಳಲ್ಲೂ ಇದ್ದಾರೆ. ಅವರು ವಾಸ್ತವಿಕತೆ ಏನೆಂದು ನಮ್ಮ ಪುಸ್ತಕಗಳನ್ನು ಓದಿ ತಿಳಿಯುವಾಗ ಅವರು ಆಶ್ಚರ್ಯ ಭರಿತರಾಗುತ್ತಾರೆ. ಇಸ್ಲಾಮ್ ಧರ್ಮದ ಪತಾಕೆ ಹೊತ್ತುಕೊಂಡಿರುವವರೆಂದು ಹೇಳಿಕೊಳ್ಳುವ ಈ ಮತಪಂಡಿತರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿಂತನೆಗಳನ್ನು ಮತ್ತು ಬರಹಗಳನ್ನು ವಿಕೃತಗೊಳಿಸಿ ಸುಳ್ಳು ಮತ್ತು ವಂಚನೆಯಿಂದ ಜನರ ಮುಂದೆ ಇರಿಸಿರುವುದಾಗಿ ಅವರು ಮನವರಿಕೆ ಮಾಡಿಕೊಳ್ಳುತ್ತಾರೆ. ನಮ್ಮ ಎಂ.ಟಿ.ಎ. ಚ್ಯಾನಲ್‌ನ ಲೈವ್ ಕಾರ್ಯಕ್ರಮಗಳಲ್ಲಿ ಮಾತ್ರವಲ್ಲ ಪತ್ರಗಳ ಮೂಲಕ ಸಹ ಅವರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುತ್ತಿದ್ದಾರೆ. ಅವರು ಈಗ ಅಹ್ಮದಿಯರಾಗಿಲ್ಲವಾದರೂ ಅವರು ಹೇಳುತ್ತಾರೆ– ನಮಗೆ ಅಹ್ಮದಿಯಾ ಜಮಾಅತಿನ ಭವ್ಯತೆ ಮನವರಿಕೆ ಆಗಿದೆ ಎಂದು. ನಮ್ಮನ್ನು ಮತಪಂಡಿತರು ಅಜ್ಞಾನದ ಪರದೆಯೊಳಗಿರಿಸಿದ್ದರು ಎಂದು ಅವರು ಹೇಳುತ್ತಾರೆ. ಅಹ್ಮದಿಯತ್ತಿನ ವಿರುದ್ಧ ಶತ್ರುತ್ವವನ್ನು ಪ್ರಕಟಿಸುವ ಮೂಲಕ ಈ ಅಜ್ಞಾನಿ ಮತಪಂಡಿತರು ತಿಳಿದುಕೊಂಡು ಅಥವಾ ತಿಳಿಯದೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮತ್ತು ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸುತ್ತಿದ್ದಾರೆ ಎಂದು ಜನರಿಗೆ ಮನವರಿಕೆಯಾಗುತ್ತದೆ.

ಅಂತೂ ಹಗೆತನ ಮತ್ತು ಕಲಹ ಇವುಗಳೇ ಈ ಮತಪಂಡಿತರ ಧರ್ಮವಾಗಿದೆ. ಆದುದರಿಂದ ಸತ್ಯವೇನೆಂದು ತಿಳಿಯಲು ಅವರು ಎಂದೂ ಪ್ರಯತ್ನಮಾಡಲಾರರು. ಮುಗ್ದ ಮುಸ್ಲಿಮರು ಎಷ್ಟು ಬಿಗಡಾಯಿಸಿದರೂ ಅವರಿಗೆ ಅದರ ಪರಿವೆಯೇ ಇಲ್ಲ. ಮತಪಂಡಿತರ ಈ ಕೆಲಸ ಹೀಗೆಯೇ ಮುಂದುವರಿಯುವುದು. ಅವರು ಹಾಗೆಯೇ ಮಾಡುತ್ತಾ ಇರಲಿ. ಏಕೆಂದರೆ ಅವರಿಗೆ ಧರ್ಮಕ್ಕಿಂತ ಅವರ ಸ್ವಾರ್ಥ ಲಾಭವೇ ಹೆಚ್ಚು ಪ್ರಿಯಕರವಾಗಿದೆ. ಆದರೆ, ಯಾವಾಗಲೂ ಸಂಭವಿಸುವ ಹಾಗೆ ಶತ್ರುಗಳ ಈ ಕೃತ್ಯ ನಮ್ಮ ವಿಶ್ವಾಸವನ್ನು ಬೆಳಗಿಸುವಂತಹದಾಗಬೇಕು. ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ನಮ್ಮ ಸಂಬಂಧವನ್ನು ವರ್ಧಿಸುವಂತಹದಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದುವ ಬಗ್ಗೆ ನಮ್ಮ ಶ್ರದ್ಧೆ ಕಡಿಮೆಯಾಗಿದ್ದರೆ ನಾವು ಈಗ ಅವುಗಳ ಕಡೆಗೆ ಹೆಚ್ಚು ಲಕ್ಷ್ಯ ನೀಡುವ ಆವಶ್ಯಕತೆ ಇದೆ.

ಒಂದು ಪಂಜಾಬ್ ಸರಕಾರದ ನಿರ್ಬಂಧವೇನು ಮಹಾ? – ಪ್ರಪಂಚದ ಎಲ್ಲಾ ಸರಕಾರಗಳೂ ನಿರ್ಬಂಧಿಸಿದರೂ ಸಹ ಈ ಕೆಲಸ ನಿಲ್ಲುವಂತಹದ್ದಲ್ಲ. ಏಕೆಂದರೆ ಅಹ್ಮದಿಯಾ ಜಮಾಅತಿನ ಕೆಲಸಗಳು ಮಾನವ ಪ್ರಯತ್ನದಿಂದ

ಮಾಡಲ್ಪಡುವ ಕೆಲಸಗಳಲ್ಲ. ಇವು ಅಲ್ಲಾಹನ ಕೆಲಸಗಳೇ ಆಗಿವೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಜ್ಞಾನದ ಖಜಾನೆಯೊಂದಿಗೆ ಕಳುಹಿಸಿರುವನು ಮತ್ತು ಅವರನ್ನು ಜಯಶಾಲಿಯನ್ನಾಗಿ ಮಾಡುವುದಾಗಿ ವಾಗ್ದಾನ ಮಾಡಿರುವನು. ನಾವು ಯಾವಾಗಲೂ ನೋಡಿದ್ದೇವೆ- ದೊಡ್ಡ ದೊಡ್ಡ ತಡೆಗಳ ನಂತರ, ದೊಡ್ಡ ದೊಡ್ಡ ವಿರೋಧಗಳ ನಂತರ ನಮ್ಮ ಜಮಾಅತ್ತಿನ ಅಭಿವೃದ್ಧಿ ಹೆಚ್ಚು ಹೆಚ್ಚಾಗಿ ಪ್ರಕಟವಾಗಿದೆ. ನಮ್ಮ ವಿರುದ್ಧ ಕೈಗೊಳ್ಳಲಾದ ಈ ಕ್ರಮ ಸಾಮಾನ್ಯವಾದುದೇ ಆಗಿದೆ. ನಮ್ಮನ್ನು ಶತ್ರುಗಳು ಎಷ್ಟು ಹೆಚ್ಚು ದಬಾಯಿಸಲು ಪ್ರಯತ್ನಿಸುತ್ತಾರೋ ಅಲ್ಲಾಹನು ಅಷ್ಟೇ ಪ್ರಮಾಣದಲ್ಲಿ ತನ್ನ ಅನುಗ್ರಹಗಳನ್ನು ವರ್ಧಿಸುತ್ತಾನೆ. ಇನ್‌ಶಾಅಲ್ಲಾಹ್, ಈಗ ಸಹ ಉತ್ತಮ ಪರಿಣಾಮ ಲಭಿಸುವುದು. ಆದುದರಿಂದ ಚಿಂತೆಯ ಆವಶ್ಯಕತೆಯೇ ಇಲ್ಲ. ಈಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳು ಲೋಕದ ಬೇರೆ ದೇಶಗಳಲ್ಲಿ ಸಹ ಮುದ್ರಣಗೊಳ್ಳುತ್ತಿರುವುದರಿಂದ ಹೆಚ್ಚು ಗಾಬರಿಗೊಳ್ಳುವ ಆವಶ್ಯಕತೆಯೇ ಇಲ್ಲ. ವೆಬ್‌ಸೈಟ್‌ಗಳಲ್ಲೂ ಅವು ಲಭ್ಯವಿದೆ. ಕೆಲವು ಗ್ರಂಥಗಳು ಆಡಿಯೋ ರೂಪದಲ್ಲಿ ಸಹ ಇವೆ. ಲಭ್ಯವಿಲ್ಲದ ಗ್ರಂಥಗಳನ್ನು ಸಹ ಲಭಿಸುವ ವ್ಯವಸ್ಥೆ -ಇನ್‌ಶಾಅಲ್ಲಾಹ್- ಮಾಡಲಾಗುವುದು. ಹಿಂದೆ ಒಂದು ಕಾಲವಿತ್ತು. ಆಗ ನಮ್ಮ ಗ್ರಂಥಗಳ ಪ್ರಕಟಣೆಯ ಮೇಲೆ ನಿರ್ಬಂಧ ಹೇರುವುದರಿಂದ ನಮಗೆ ಹಾನಿ ಆಗಬಹುದೆಂದು ಚಿಂತೆ ಇತ್ತು. ಆದರೆ ಈಗ ಅಲ್ಲಾಹನ ಅನುಗ್ರಹದಿಂದ ಜ್ಞಾನದ ಈ ಭಂಡಾರವು ವಾತಾವರಣದಲ್ಲಿ ಹರಡಿಕೊಂಡಿದೆ. ಅವು ಒಂದು ಬಟನ್ ಒತ್ತಿದಾಗ ನಮ್ಮ ಮುಂದೆ ಪ್ರತ್ಯಕ್ಷವಾಗುತ್ತವೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನುಡಿ ಮುತ್ತುಗಳಿಂದಲೂ ಅವರ ಗ್ರಂಥಗಳಿಂದಲೂ ಹೆಚ್ಚು ಹೆಚ್ಚಾಗಿ ಲಾಭ ಪಡೆಯಲು ಪ್ರಯತ್ನ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಎಂ.ಟಿ.ಎ.ಯಲ್ಲಿ ಇನ್‌ಶಾಅಲ್ಲಾಹ್- ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳ ದರ್ಸ್‌ಗೆ ಮೊದಲಿಗಿಂತ ಹೆಚ್ಚು ಸಮಯ ಬಳಸಬೇಕೆಂದು ನಾನು ಯೋಚಿಸುತ್ತಿದ್ದೇನೆ. ಈ ರೀತಿ ಪಾಕಿಸ್ಥಾನದ ಒಂದು ರಾಜ್ಯ ಸರಕಾರದ ಕಾನೂನು ಕಾರಣದಿಂದ ಲೋಕದಾದ್ಯಂತ ಇರುವ ಅಹ್ಮದಿಯರಿಗೆ ಲಾಭ ಉಂಟಾಗುವುದು. ನಮ್ಮ ವಿರೋಧಿಗಳು ಯಾವಾಗಲೂ ಹೇಳುತ್ತಿರುವುದು- "ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವುದರಲ್ಲಿ ಬಹಳ ಉನ್ನತ ಮಟ್ಟದಲ್ಲಿದ್ದೇವೆ" ಎಂದು. ಅವರು ಇಸ್ಲಾಮೀ ತತ್ವಗಳ ಧ್ವಜವಾಹಕರಾಗಿರುವುದರಿಂದಲೇ ನಮ್ಮನ್ನು ವಿರೋಧಿಸುತ್ತಿದ್ದಾರೆ ಎಂದು ಸಹ ಅವರು ಹೇಳುತ್ತಾರೆ. ಆದರೆ ಈ ಜನರು ನ್ಯಾಯದ ದೃಷ್ಟಿಹೊಂದಿ ಅಹ್ಮದಿಯಾ ಜಮಾಅತಿನ ಸಾಹಿತ್ಯಗಳನ್ನು ಯಾವತ್ತೂ ಓದಲಿಲ್ಲ. ಅದಕ್ಕೊಸ್ಕರ ಅವರು ಪ್ರಯತ್ನ ಮಾಡಲೂ ಇಲ್ಲ. ನಾವು ವಿರೋಧಿಗಳ ಈ ವಾದಗಳ ವಾಸ್ತವಿಕತೆ ಮತ್ತು ಅವರ ನೈಜ ಮುಖದ ಚಿತ್ರವನ್ನು ಆಗಾಗ ಅವರಿಗೆ ತೋರಿಸುತ್ತಲೇ ಬಂದಿದ್ದೇವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು -ನಊದು:ಬಿಲ್ಲಾಹ್- ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನದ ವಿರುದ್ಧ, ಅವರ ಭವ್ಯ ಪದವಿಯ ವಿರುದ್ಧ, ಅವರ ಉಪದೇಶಗಳ ವಿರುದ್ಧ ಬರೆದಿದ್ದಾರೆಂದು ನಮ್ಮ ವಿರೋಧಿಗಳು ಹೇಳುತ್ತಾರೆ. ಆ ಬರಹಗಳಲ್ಲಿ ದ್ವೇಷ ಮತ್ತು ನೋವನ್ನುಂಟುಮಾಡುವ ಸಂಗತಿಗಳಿವೆ ಎಂದು ಸಹ ವಿರೋಧಿಗಳು ಆಕ್ಷೇಪಿಸುತ್ತಾರೆ. ಈ ವಾದವನ್ನು ಖಂಡಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬರಹಗಳಿಂದ ಕೆಲವು ಉಲ್ಲೇಖಗಳನ್ನು ಈಗ ನಾನು ನೀಡುವೆನು. ಎಲ್ಲವುಗಳನ್ನೂ ವಿವರಿಸಲು ಸಾಧ್ಯವಿಲ್ಲ. ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ವಿಸ್ತಾರವಾಗಿ ಬರೆದಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವೈಭವವನ್ನೂ ಅವರ ಪದವಿಯನ್ನೂ ನಮಗೆ ವಿವರಿಸಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತಾನು ಪ್ರೀತಿಸುವುದಾಗಿ ಹೇಳಿಕೊಳ್ಳುವ ಯಾವುದೇ ವ್ಯಕ್ತಿ ಈ ಉಲ್ಲೇಖಗಳನ್ನು ಓದುವುದರಿಂದ ಮತ್ತು ಆಲಿಸುವುದರಿಂದ ತನ್ನ ಕಿವಿ ಮತ್ತು ಕಣ್ಣುಗಳನ್ನು ತಡೆಯಲು ಸಾಧ್ಯವೇ? ಮತಪಂಡಿತರೆಂದು ಹೇಳಿಕೊಳ್ಳುವವರ ಬಗ್ಗೆ ನಮಗೆ ಗೊಡವೆಯಿಲ್ಲ. ಎಂ.ಟಿ.ಎ ಮೂಲಕ ನಮ್ಮ ಮಾತುಗಳನ್ನು ಆಲಿಸುವ ಸಾವಿರಾರು ಜನರ ಹೃದಯಗಳನ್ನು ಇನ್ನಷ್ಟು ಹೆಚ್ಚು ತೆರೆಯಲು ಮತ್ತು ಅಹ್ಮದಿಯರ ಹೃದಯದಲ್ಲೂ ಮೆದುಳಿನಲ್ಲೂ ಇನ್ನಷ್ಟು ಪ್ರಕಾಶ ಉರಿಸಲು ಮತ್ತು ಸರಿಯಾದ ತಿಳುವಳಿಕೆ ಗಳಿಸಲು ನಾನು ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದಿಡುತ್ತೇನೆ.

ಮೊದಲನೆಯ ಉದಾಹರಣೆ ಅಲ್ಲಾಹನ ಸ್ತುತಿ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದುರೂದ್ ಅರ್ಪಿಸುವ ಪ್ರಿಯಕರವಾದ ವಿಧಾನವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಬರೆದಿದ್ದಾರೆ:

"ಓ ನಮ್ಮ ದೇವ, ನಿನಗೆ ಸಹಸ್ರಾರು ಕೃತಜ್ಞತೆಗಳು. ನೀನು ನಮಗೆ ನಿನ್ನನ್ನು ಗುರುತಿಸುವ ಮಾರ್ಗ ನೀನೇ ತೋರಿಸಿ ಕೊಟ್ಟಿರುವೆ. ನೀನು ನಿನ್ನ ಪವಿತ್ರ ಗ್ರಂಥಗಳನ್ನು ಅವತೀರ್ಣಗೊಳಿಸಿ ಬುದ್ಧಿಯ ಮತ್ತು ಯೋಚನೆಯ ತಪ್ಪುಗಳಿಂದ ನಮ್ಮನ್ನು ರಕ್ಷಿಸಿದೆ. ಹಝ್ರತ್ ಸಯ್ಯಿದುರ್ರುಸುಲ್ (ಪ್ರವಾದಿಗಳ ನೇತಾರ) ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೂ ಅವರ ಕುಟುಂಬದವರಿಗೂ ಅವರ ಸಂಗಡಿಗರಿಗೂ ದುರೂದ್ ಮತ್ತು ಸಲಾಮ್ ಅರ್ಪಿಸುತ್ತೇವೆ. ದಾರಿ ತಪ್ಪಿದ ಲೋಕವನ್ನು ಅವರ ಮೂಲಕ ಅಲ್ಲಾಹನು ನೇರಮಾರ್ಗದಲ್ಲಿ ನಡೆಸಿದನು. ಅವರು ಸುಧಾರಕರೂ ಜನರ ಹಿತೈಷಿಯೂ ಆಗಿದ್ದರು. ಯಾಕೆಂದರೆ, ಅವರು ದಾರಿ ತಪ್ಪಿದ ಜನರನ್ನು ನೇರಮಾರ್ಗದಲ್ಲಿ ನಡೆಸಿದರು. ಅವರು ಮುಹ್‌ಸಿನ್ (ಪರೋಪಕಾರಿ) ಆಗಿರುವರು. ಯಾಕೆಂದರೆ,

ಅವರು ಜನರನ್ನು ಬಹುದೇವಾರಾಧನೆ ಮತ್ತು ವಿಗ್ರಹಗಳ ಅನಿಷ್ಟದಿಂದ ಬಿಡುಗಡೆಗೊಳಿಸಿದರು. ಅವರು ಪ್ರಕಾಶವೂ ಪ್ರಕಾಶ ಚೆಲ್ಲುವವರೂ ಆಗಿದ್ದರು. ಯಾಕೆಂದರೆ, ಅವರು ತೌಹೀದ್ (ಏಕದೇವಾರಾಧನೆ)ಯ ಪ್ರಕಾಶವನ್ನು ಲೋಕದಲ್ಲಿ ಹರಡಿದರು. ಅವರು ಈ ಕಾಲಘಟ್ಟದ ವೈದ್ಯರೂ ಚಿಕಿತ್ಸಕರೂ ಆಗಿದ್ದರು. ಯಾಕೆಂದರೆ, ಅವರು ಬಿಗಡಾಯಿಸಿದ ಹೃದಯಗಳನ್ನು ಸತ್ಯದಲ್ಲಿ ಸ್ಥಿರವಾಗಿರುವಂತೆ ಮಾಡಿದರು. ಅವರು ಅದ್ಭುತ ಕೃತ್ಯ ಮಾಡುವವರಾಗಿದ್ದರು. ಯಾಕೆಂದರೆ, ಅವರು ಮೃತರಿಗೆ ಜೀವನದ ನೀರು ಕುಡಿಸಿದರು. ಅವರು ದಯಾಳುವೂ ಪರಹಿತಕಾರಿಯೂ ಆಗಿದ್ದರು. ಯಾಕೆಂದರೆ, ಅವರು ತನ್ನ ಸಮುದಾಯಕ್ಕೋಸ್ಕರ ದುಃಖಿಸಿದರು. ಮತ್ತು ಅವರಿಗಾಗಿ ನೋವು ಅನುಭವಿಸಿದರು. ಅವರು ಪಹಿಲ್ವಾನರೂ ಶೂರರೂ ಆಗಿದ್ದರು. ಅವರು ನಮ್ಮನ್ನು ಮೃತ್ಯುವಿನ ಬಾಯಿಯಿಂದ ರಕ್ಷಿಸಿ ಹೊರಗೆ ತಂದರು. ಅವರು ಮೃದು ಹೃದಯರೂ ನಿಸ್ವಾರ್ಥಿಯೂ ಆಗಿದ್ದರು. ಅವರು ದೇವನ ದಾಸ್ಯಾರಾಧನೆಯಲ್ಲಿ ಸಂಪೂರ್ಣ ವಿನಯಾನ್ವಿತರಾಗಿ ತಲೆಬಾಗಿ ತನ್ನನ್ನು ಮಣ್ಣಿನೊಂದಿಗೆ ಸೇರಿಸಿದರು. ಅವರು ಪರಿಪೂರ್ಣ ಏಕದೇವವಿಶ್ವಾಸಿಯೂ ಜ್ಞಾನದ ಸಾಗರವೂ ಆಗಿದ್ದರು. ಅವರಿಗೆ ದೇವನ ಪ್ರತಾಪ ಮಾತ್ರ ಇಷ್ಟಕರವಾಯಿತು. ಉಳಿದವುಗಳನ್ನು ಅವರು ತನ್ನ ದೃಷ್ಟಿಯಿಂದ ದೂರವಿಟ್ಟರು. ಅವರು ಪರಮದಯಾವಂತನ ಒಂದು ಅದ್ಭುತ ದೃಷ್ಟಾಂತವಾಗಿದ್ದರು. ಅವರು ನಿರಕ್ಷರನಾಗಿದ್ದರೂ ದೈವಿಕ ಜ್ಞಾನದಲ್ಲಿ ಎಲ್ಲರಿಗಿಂತಲೂ ಮಿಗಿಲಾಗಿದ್ದರು. ದಾರಿತಪ್ಪಿದ ಜನಾಂಗವನ್ನು ದಾರಿತಪ್ಪಿದವರೆಂದು ಅವರು ಸಾಬೀತುಗೊಳಿಸಿದರು.''

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ವಭಾವಗುಣಗಳು, ಅವರು ಕಷ್ಟಕಾಲದಲ್ಲಿದ್ದಾಗ ಹೇಗಿತ್ತು, ಮತ್ತು ಅವರು ಜಯಶಾಲಿಯಾಗಿದ್ದ ಕಾಲದಲ್ಲಿ ಹೇಗಿತ್ತು ಎನ್ನುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

''ಪ್ರವಾದಿಗಳು ಆಗಮಿಸುವುದು ಏಕೆಂದರೆ ಎಲ್ಲ ಉತ್ತಮ ಸ್ವಭಾವಗುಣಗಳಲ್ಲಿ ಅವರನ್ನು ಜನರು ಅನುಸರಿಸಲಿಕ್ಕಾಗಿರುತ್ತದೆ. ಅಲ್ಲಾಹನು ಪ್ರವಾದಿಗಳಿಗೆ ಯಾವ ವಿಷಯಗಳಲ್ಲಿ ಸ್ಥಿರತೆಯನ್ನು ಅನುಗ್ರಹಿಸಿರುವನೋ ಆ ಸ್ಥಿರತೆಯನ್ನು ಸತ್ಯಾನ್ವೇಷಿಗಳು ಸಹ ಅನುಸರಿಸಿ ನಡೆಯಲು ಪ್ರಯತ್ನಿಸಲಿಕ್ಕಾಗಿರುತ್ತದೆ. ಅತ್ಯಂತ ಸ್ಪಷ್ಟವಾದ ಸಂಗತಿಯೇನೆಂದರೆ, ಪ್ರತಿಯೊಂದು ಉತ್ತಮ ಸ್ವಭಾವಗುಣದ ಪ್ರಕಟಣೆಗೆ ಒಂದು ನಿಶ್ಚಿತ ಸಮಯವಿರುತ್ತದೆ. ಉತ್ತಮ ಸ್ವಭಾವಗುಣ ಅದು ಪ್ರಕಟವಾಗಬೇಕಾದ ಸಮಯದಲ್ಲಿ ಪ್ರಕಟವಾದರೆ ಮಾತ್ರ ಅದು ಆ ವ್ಯಕ್ತಿಯ ಉತ್ತಮ ಸ್ವಭಾವಗುಣ ಎಂದು ಸಾಬೀತಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅನ್ಯರ ಹೃದಯಗಳಲ್ಲೂ ಅದರ ಪ್ರಭಾವ ಉಂಟಾಗುತ್ತದೆ. ಉದಾಹರಣೆಗೆ ಕ್ಷಮಿಸುವುದು ಒಂದು ಉತ್ತಮ ಸ್ತುತ್ಯರ್ಹ ಗುಣವಾಗಿದೆ. ಒಬ್ಬನಿಗೆ ಪ್ರತೀಕಾರ ಮಾಡುವ ಶಕ್ತಿ ಇರುವಾಗ ಸಹ ಅವನು ಕ್ಷಮಿಸುವುದು ಉತ್ತಮ ಸ್ತುತ್ಯರ್ಹ ಸ್ವಭಾವಗುಣವಾಗಿರುತ್ತದೆ. ಒಬ್ಬನಿಗೆ ಸುಖಭೋಗದ ಶಕ್ತಿ ಲಭಿಸಿರುವಾಗ ಅವನು ಆತ್ಮನಿಯಂತ್ರಣ ಮಾಡಿಕೊಳ್ಳುವುದಾದರೆ ಅದು ಆತನ ಉತ್ತಮ ಸ್ವಭಾವಗುಣವಾಗಿ ಪರಿಗಣಿಸಲ್ಪಡುವುದು. ಅಲ್ಲಾಹನು ಉದ್ದೇಶಿಸುವುದೇನೆಂದರೆ ಅವನ ಪ್ರವಾದಿಗಳು ಮತ್ತು ಅವನಿಗೆ ಪ್ರಿಯರಾದವರು ಉತ್ತಮ ಸ್ವಭಾವಗಳನ್ನು ಅನ್ಯರಿಗೆ ಮಾದರಿಯಾಗುವ ರೀತಿಯಲ್ಲಿ ಪ್ರಕಟಿಸಬೇಕೆಂದಾಗಿದೆ. ಅಲ್ಲಾಹನು ತನ್ನ ಈ ನಿರ್ಧಾರ ಈಡೇರಿಸಲು ಪ್ರವಾದಿಗಳ ಆಧ್ಯಾತ್ಮಿಕ ಜೀವಿತವನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದಾನೆ. ಒಂದು ಭಾಗ ಕಷ್ಟ ಮತ್ತು ವಿಪತ್ತುಗಳ ಕಾಲವಾಗಿರುತ್ತದೆ. ಆಗ ಅವರಿಗೆ ಪ್ರತಿಯೊಂದು ರೀತಿಯ ಕಷ್ಟ ಅನುಭವಿಸಬೇಕಾಗುತ್ತದೆ. ಅಂತಹ ಕಾಲದಲ್ಲಿ ಅವರ ಮೂಲಕ ಉನ್ನತ ಸ್ವಭಾವಗುಣಗಳು ಪ್ರಕಟವಾಗುತ್ತವೆ. ಇಂತಹ ಕಷ್ಟಕಾಲದಲ್ಲಿ ಹೊರತು ಅವು ಪ್ರಕಟವಾಗಲಾರವು.

ಎರಡನೆಯ ಭಾಗ ಪ್ರವಾದಿಗಳ ಮತ್ತು ದೇವನಿಗೆ ಪ್ರಿಯರಾದವರ ವಿಜಯದ ಮತ್ತು ಸಂಪತ್ತಿನ ಸಮೃದ್ಧಿಯ ಕಾಲವಾಗಿರುತ್ತದೆ. ಆಗ ಪ್ರಕಟವಾಗುವ ಸ್ವಭಾವ ಗುಣಗಳಿಗೆ ಜಯಶಾಲಿಯಾಗಿರುವುದು, ಸಂಪತ್ತನ್ನು ಹೊಂದಿರುವುದು, ಶಕ್ತಿಶಾಲಿ ಆಗಿರುವುದು ಆವಶ್ಯಕವಾಗಿರುತ್ತದೆ. ಆಗ ತನಗೆ ಕಷ್ಟಕೊಟ್ಟವರಿಗೆ ಕ್ಷಮಿಸಲಾಗುತ್ತಿದೆ, ತೊಂದರೆ ಕೊಟ್ಟವರಿಗೆ ಕ್ಷಮೆ ನೀಡಲಾಗುತ್ತದೆ. ಶತ್ರುಗಳನ್ನು ಪ್ರೀತಿಸಲಾಗುತ್ತಿದೆ. ತನಗೆ ಕೆಡುಕನ್ನು ಬಯಸಿದವರಿಗೆ ಒಳಿತನ್ನು ಹಾರೈಸಲಾಗುತ್ತಿದೆ. ಅವರು ಸಂಪತ್ತನ್ನು ಪ್ರೀತಿಸುವುದಿಲ್ಲ. ಸಂಪತ್ತಿನಿಂದ ಅಹಂಭಾವ ಹೊಂದುವುದಿಲ್ಲ. ಜಿಪುಣ ಮನೋಭಾವ ಹೊಂದಿರುವುದಿಲ್ಲ. ಕ್ಷಮೆಯ ಬಾಗಿಲು ತೆರೆದಿಡಲಾಗುತ್ತಿದೆ. ಸಂಪತ್ತಿನಿಂದ ಸ್ವಂತ ಆಶಾಭಿಲಾಷೆಗಳನ್ನು ಈಡೇರಿಸುವುದಿಲ್ಲ. ಅಧಿಕಾರ ಲಭಿಸಿದರೆ ಅದರ ಮೂಲಕ ದೌರ್ಜನ್ಯವೆಸಗುವುದಿಲ್ಲ. ಈ ಎಲ್ಲ ಉತ್ತಮ ಸ್ವಭಾವಗುಣಗಳು ಪ್ರಕಟವಾಗಲು ಶಕ್ತಿಶಾಲಿಯೂ ಐಶ್ವರ್ಯವಂತನೂ ಆಗಬೇಕಾದುದು ಆವಶ್ಯಕವಾಗಿದೆ. ಮನುಷ್ಯನಿಗೆ ಸಂಪತ್ತು ಮತ್ತು ಅಧಿಕಾರ ಲಭಿಸಿರುವಾಗ ಈ ಉತ್ತಮ ಸ್ವಭಾವ ಗುಣಗಳು ಪ್ರಕಟವಾಗಬೇಕಾಗಿದೆ. ಒಟ್ಟಿನಲ್ಲಿ, ಕಷ್ಟಕಾಲ ಮತ್ತು ಸುಖದ ಕಾಲ ಇವುಗಳಲ್ಲಿ ಮಾತ್ರ ಈ ಎರಡು ರೀತಿಯ ಉತ್ತಮ ಸ್ವಭಾವಗುಣಗಳು ಪ್ರಕಟವಾಗುವುವು. ಔದಾರ್ಯ ಮತ್ತು ತ್ಯಾಗ ಮನೋಭಾವ, ಇದ್ದುದರಲ್ಲಿ ತೃಪ್ತಿ, ಶೌರ್ಯ ಮತ್ತು ದೇವನೊಂದಿಗೆ ಪ್ರೀತಿ ಮೊದಲಾದ ಎಲ್ಲ ಉತ್ತಮ ಸ್ವಭಾವಗುಣಗಳನ್ನು ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಹೇಗೆ ಪ್ರಕಟಪಡಿಸಿದನೆಂದರೆ ಅಂತಹ ಉದಾಹರಣೆ ಲೋಕದಲ್ಲಿ ಹಿಂದೆಂದೂ ಪ್ರಕಟವಾಗಿರಲಿಲ್ಲ ಮತ್ತು ಮುಂದೆಂದೂ ಪ್ರಕಟವಾಗಲಾರದು.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ''ಅಲ್ಲಾಹನು ಪರಿಶುದ್ಧರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ವಹೀ(ಸಂದೇಶವಾಣಿ) ಮತ್ತು ರಿಸಾಲತ್(ಸಂದೇಶವಾಹಕತ್ವ) ಖತ್‌ಮ್ ಗೊಳಿಸಿದುದು ಈ ಅರ್ಥದಲ್ಲಾಗಿದೆ: ಎಲ್ಲ

ಪರಿಪೂರ್ಣ ಗುಣಗಳು ಈ ಮಹಾನುಭಾವರಲ್ಲಿ ಸಮಾವೇಶ ಗೊಂಡು ಪರಿಪೂರ್ಣತೆಯನ್ನು ಪ್ರಾಪಿಸಿ ಮುಕ್ತಾಯವಾಗಿವೆ. **ವ ಹಾಝ಼ಾ ಫಝ್ಲುಲ್ಲಾಹಿ ಯೂತೀಹಿ ಮನ್‌ಯಶಾಅ್**. ಇದು ಅಲ್ಲಾಹನ ಅನುಗ್ರಹವಾಗಿದೆ. ಅಲ್ಲಾಹನು ತಾನು ಇಚ್ಛಿಸುವವರಿಗೆ ಅದನ್ನು ದಯಪಾಲಿಸುತ್ತಾನೆ.''

ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವವನು ಮತ್ತು ಅನುಸರಿಸುವವನು ಅಲ್ಲಾಹನಿಗೂ ಪ್ರಿಯನಾಗುತ್ತಾನೆ ಎಂಬುದನ್ನು ವಿವರಿಸುತ್ತಾ ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ''ಅಲ್ಲಾಹನು ಯಾರನ್ನಾದರೂ ಪ್ರೀತಿಸಬೇಕಾದರೆ ಆ ವ್ಯಕ್ತಿ ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಬೇಕೆಂಬ ಶರತ್ತನ್ನು ಪಾಲಿಸಬೇಕಾಗಿದೆ.''

ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಲ್ಲ ಮನುಷ್ಯರಿಗಿಂತ ಪರಿಪೂರ್ಣ ಮನುಷ್ಯರೂ ಪರಿಪೂರ್ಣ ಪ್ರವಾದಿಯೂ ಆಗಿದ್ದರೆಂದು ವಿವರಿಸುತ್ತಾ ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು:

''ಆ ಮಹಾನುಭಾವರು ತನ್ನ ವ್ಯಕ್ತಿತ್ವದ ಮೂಲಕ, ತನ್ನ ಸ್ವಭಾವಗುಣಗಳ ಮೂಲಕ, ತನ್ನ ಕೃತ್ಯಗಳ ಮೂಲಕ, ತನ್ನ ಅನುಷ್ಠಾನ ಕರ್ಮಗಳ ಮೂಲಕ, ತನ್ನ ಆಧ್ಯಾತ್ಮಿಕ ಪವಿತ್ರ ಶಕ್ತಿಯು ತುಂಬಿದ ಹೊಳೆಯ ಮೂಲಕ, ಪರಿಪೂರ್ಣ ಮಾದರಿಯನ್ನು ಜ್ಞಾನದಿಂದಲೂ, ಕೃತ್ಯಗಳಿಂದಲೂ ಸತ್ಯಸಂಧವಾಗಿಯೂ ಸ್ಥಿರ ಚಿತ್ತರಾಗಿಯೂ ಪ್ರಕಟಿಸಿದರು. ಮತ್ತು ಪರಿಪೂರ್ಣ ಮನುಷ್ಯ (ಇನ್‌ಸಾನೆ ಕಾಮಿಲ್) ಎಂದು ಕರೆಯಲ್ಪಟ್ಟರು. ಅವರು ಎಲ್ಲರಿಗಿಂತಲೂ ಪರಿಪೂರ್ಣರಾದವರಾಗಿದ್ದರು. ಅವರು ಪರಿಪೂರ್ಣ ಪ್ರವಾದಿಯಾಗಿದ್ದರು. ಅವರು ಪರಿಪೂರ್ಣ ಅನುಗ್ರಹ ಸಮೇತರಾಗಿ ಆಗಮಿಸಿದರು. ಅವರ ಮೂಲಕ ಆಧ್ಯಾತ್ಮಿಕ ಪುನರುತ್ಥಾನ ಸಂಭವಿಸಿತು. ಅದು ಲೋಕದ ಪ್ರಥಮ ಖಿಯಾಮತ್ ಆಗಿತ್ತು. ಮೃತವಾಗಿದ್ದ ಒಂದು ಲೋಕವೇ ಅವರ ಮೂಲಕ ಜೀವಂತವಾಯಿತು. ಆ ಅನುಗ್ರಹ ಭರಿತ ಪ್ರವಾದಿ ಹಝ಼್ರತ್ ಖಾತಮುಲ್ ಅಂಬಿಯಾ, ಇಮಾಮುಲ್ ಅಸ್‌ಫಿಯಾ, ಖಾತಮುಲ್ ಮುರ್‌ಸಲೀನ್, ಫಖರುನ್ನಬಿಯ್ಯೀನ್ ಹಝ಼್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿರುತ್ತಾರೆ.''

ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಲೋಕಕ್ಕೆ ದೊರಕಿದ ಉಪಕಾರಗಳನ್ನು ಪ್ರಸ್ತಾಪಿಸುತ್ತಾ ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ''ಅಲ್ಲಾಹನು ನಮಗೆ ಎಂತಹ ಸಂದೇಶವಾಹಕರನ್ನು ಕಳುಹಿಸಿದನೆಂದರೆ ಅವರು ಕಾರುಣ್ಯ ಮೂರ್ತಿ ಆಗಿದ್ದರು. ಅವರು ಎಲ್ಲ ಒಳಿತುಗಳನ್ನು ಹೊಂದಿದವರೂ ಎಲ್ಲ ಪರಿಪೂರ್ಣತೆಗಳನ್ನು ಗಳಿಸಿದವರೂ ಆಗಿದ್ದರು. ಎಲ್ಲ ಗುಣಗಳಲ್ಲೂ ಎಲ್ಲರಿಗಿಂತಲೂ ಮುಂದಾಗಿರುವವರಾಗಿದ್ದರು. ಅವರು ಎಲ್ಲ ಪ್ರವಾದಿಗಳ ಮತ್ತು ಸಂದೇಶವಾಹಕರ ಖಾತಮ್ (ಮುದ್ರೆ) ಆಗಿದ್ದರು. ಉಮ್ಮುಲ್ ಖುರಾದಲ್ಲಿ ಆಗಮಿಸಬೇಕಾಗಿದ್ದ ವಾಗ್ದತ್ತ ಪ್ರವಾದಿ ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ಆಗಿದ್ದಾರೆ. ಅವರಿಂದ ಅನುಗ್ರಹಗಳಿಸಿದವರ ನಾಲಗೆಗಳು ಅಲ್ಲಾಹನ ಸ್ತುತಿಯಿಂದ ಒದ್ದೆಯಾಗುತ್ತಾ ಇರುತ್ತವೆ. ಅವರು ಪರಿಪೂರ್ಣ ಹೊಗಳಿಕೆಗೆ ಅರ್ಹರಾಗಿದ್ದಾರೆ. ಏಕೆಂದರೆ ಅವರು ತನ್ನ ಸಮುದಾಯಕ್ಕೋಸ್ಕರ ಅತ್ಯಂತ ಕಷ್ಟಪಟ್ಟರು ಮತ್ತು ಧರ್ಮದ ಭವನವನ್ನು ಕಟ್ಟಿದರು. ಅವರು ನಮಗೆ ಪ್ರಕಾಶಮಾನವಾದ ಗ್ರಂಥವನ್ನು ತಂದರು. ಅವರು ತನ್ನ ಪ್ರಭುವಾದ ಸರ್ವಲೋಕ ಪರಿಪಾಲಕನಾದ ಅಲ್ಲಾಹನ ಸಂದೇಶವನ್ನು ನಮಗೆ ತಲಪಿಸಲಿಕ್ಕಾಗಿ ಅನೇಕ ರೀತಿಯ ಕಷ್ಟಗಳಿಗೂ ಪಾತ್ರರಾದರು. ಹಿಂದಿನ ಗ್ರಂಥಗಳಲ್ಲಿ ಅಪೂರ್ಣವಾಗಿದ್ದವುಗಳನ್ನು ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪರಿಪೂರ್ಣಗೊಳಿಸಿದರು. ಅತಿರೇಕದಿಂದಲೂ ಮತ್ತು ನ್ಯೂನತೆಗಳಿಂದಲೂ ಮುಕ್ತವಾದ ಒಂದು ಪರಿಪೂರ್ಣ ನಿಯಮಸಂಹಿತೆ (ಶರೀಅತ್) ನಮಗೆ ಒದಗಿಸಿಕೊಟ್ಟರು. ಮತ್ತು ಸ್ವಭಾವಗುಣಗಳನ್ನು ಪರಿಪೂರ್ಣತೆಗೆ ತಲಪಿಸಿದರು.''

ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖತ್‌ಮೆ ನುಬುವ್ವತ್ ಪದವಿಯ ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ''ನಮ್ಮ ಯಜಮಾನರಾದ ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನು ಕಳುಹಿಸಿದ ನಬಿ ಎಂದೂ ರಸೂಲ್ ಎಂದೂ ನಾವು ನಂಬುತ್ತೇವೆ. ಅವರ ಧರ್ಮ ಇತರ ಎಲ್ಲ ಧರ್ಮಗಳಿಗಿಂತ ಶ್ರೇಷ್ಠ ಎಂದೂ ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ ಎಂದೂ ನಾವು ನಂಬುತ್ತೇವೆ. ಅವರ ಅನುಗ್ರಹದ ಮೂಲಕ ತರಬೇತಿ ಪಡೆದ ಮತ್ತು ಅವರು ನುಡಿದ ಭವಿಷ್ಯವಾಣಿಗಳನ್ನು ಈಡೇರಿಸುವ ಪ್ರವಾದಿ ಮಾತ್ರ ಅವರ ನಂತರ ಆಗಮಿಸಲು ಸಾಧ್ಯ. ಬೇರೆ ಯಾವ ಪ್ರವಾದಿಯೂ ಆಗಮಿಸಲು ಸಾಧ್ಯವಿಲ್ಲ. ಖತ್‌ಮೆ ನುಬುವ್ವತ್ ಎಂದರೆ ನುಬುವ್ವತ್‌ಗೆ ಸಂಬಂಧಪಟ್ಟ ಎಲ್ಲ ಪರಿಪೂರ್ಣತೆಗಳು ನಮ್ಮ ಪ್ರವಾದಿ, ಅಫ್‌ಝಲುರ್ರುಸುಲ್ ವಲ್ ಅಂಬಿಯಾ (ಸಂದೇಶವಾಹಕರಲ್ಲಿ ಮತ್ತು ಪ್ರವಾದಿಗಳಲ್ಲಿ ಶ್ರೇಷ್ಠರಾದ) ಅವರಲ್ಲಿ ಮುಗಿತಾಯವಾಯಿತು. ಅವರ ನಂತರ ಅವರ ಉಮ್ಮತ್‌ಗೆ(ಸಮುದಾಯಕ್ಕೆ) ಸೇರಿದ, ಮತ್ತು ಪರಿಪೂರ್ಣವಾಗಿ ಅವರನ್ನು ಅನುಸರಿಸುವ, ಮತ್ತು ಅವರ ಆಧ್ಯಾತ್ಮಿಕ ಶಕ್ತಿಯಿಂದ ಆಧ್ಯಾತ್ಮಿಕ ಅನುಗ್ರಹ ಪಡೆದವರು ಮತ್ತು ಅವರ ಪ್ರಕಾಶದಿಂದಲೇ ಬೆಳಗಿಸಪಟ್ಟವರು ಮಾತ್ರ ನಬಿಯಾಗಿ ಆಗಮಿಸಲು ಸಾಧ್ಯ.''

ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ''ಅಲ್ಲಾಹನ ಮುಂದೆ ಶಿಫಾರಸು ಮಾಡಬಲ್ಲ ಶಫೀಅ್ (ಶಿಫಾರಸುಗಾರ) ಈಗ ಹಝ಼್ರತ್

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾತ್ರವಾಗಿದ್ದಾರೆ.”

“ಈಗ ಪವಿತ್ರ ಖುರ್‌ಆನ್ ಹೊರತು ಲೋಕದಲ್ಲಿ ಮನುಷ್ಯರಿಗೆ ಬೇರೆ ಯಾವ ಗ್ರಂಥವೂ ಇಲ್ಲ. ಎಲ್ಲ ಮನುಷ್ಯರಿಗೋಸ್ಕರ ಶಿಫಾರಸು ಮಾಡಬಲ್ಲ ಏಕ ಮಾತ್ರ ಸಂದೇಶವಾಹಕ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿದ್ದಾರೆ. ಆದುದರಿಂದ ನೀವು ವೈಭವಶಾಲಿಯಾದ ಈ ಪ್ರವಾದಿಯನ್ನು ಸತ್ಯವಾಗಿ ಪ್ರೀತಿಸುವವರಾಗಿರಿ. ಅವರ ಮೇಲೆ ಬೇರೆ ಯಾರಿಗೂ ಶ್ರೇಷ್ಠತೆಯನ್ನು ನೀಡಬೇಡಿರಿ– ನೀವು ಆಕಾಶದಲ್ಲಿ ಮೋಕ್ಷ ಗಳಿಸಿದವರೆಂದು ಬರೆಯಲ್ಪಡಲಿಕ್ಕಾಗಿ. ಮೋಕ್ಷವೆಂಬುದು ಮರಣದ ನಂತರ ಪ್ರಕಟವಾಗುವಂತಹದ್ದಲ್ಲ ಎಂದು ನೀವು ನೆನಪಿಟ್ಟುಕೊಳ್ಳಿರಿ. ವಾಸ್ತವಿಕ ಮೋಕ್ಷ ಇಹಲೋಕದಲ್ಲಿಯೂ ತನ್ನ ಪ್ರಕಾಶ ತೋರಿಸುತ್ತದೆ. ಮೋಕ್ಷಗಳಿಸಿದವನು ಯಾರು? ಅಲ್ಲಾಹನು ಸತ್ಯವಾಗಿ ಅಸ್ತಿತ್ವದಲ್ಲಿದ್ದಾನೆ ಎಂದು ನಂಬುವವನು ಹಾಗೂ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನ್ನ ಮತ್ತು ಎಲ್ಲ ಸೃಷ್ಟಿಗಳ ಶಫೀಅ್ (ಶಿಫಾರಸುಗಾರ) ಆಗಿರುವರೆಂದು ನಂಬುವವನು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಮಾನರಾದ ಪ್ರವಾದಿ ಬೇರೆ ಯಾರೂ ಇಲ್ಲ ಎಂದು ನಂಬುವವನು. ಪವಿತ್ರ ಖುರ್‌ಆನಿಗೆ ಸಮಾನವಾದ ಬೇರೆ ಯಾವ ಗ್ರಂಥವೂ ಇಲ್ಲ ಎಂದು ನಂಬುವವನು. ಯಾರೂ ಶಾಶ್ವತವಾಗಿ ಜೀವಿಸಿರಲಾರರೆಂದೂ ಆದರೆ, ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವಾಗಲೂ ಜೀವಿಸಿರುವರು ಎಂದು ಅಲ್ಲಾಹನು ನಿರ್ಧರಿಸಿರುವನು.”

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂಬಂಧಿಸಿ ಬರೆದ ಅಸಂಖ್ಯಾತ ಉಲ್ಲೇಖಗಳಿಂದ ಕೆಲವನ್ನು ಆಯ್ಕೆ ಮಾಡಿ ನಾನು ನಿಮ್ಮ ಮುಂದಿರಿಸಿರುವೆನು. ಇದೇ ರೀತಿ ಇಸ್ಲಾಮ್ ಧರ್ಮದ ವಿವಿಧ ತತ್ವಗಳನ್ನು ವಿವರಿಸುವ ಒಂದು ಖಜಾನೆಯನ್ನೇ ಅವರು ಲೋಕಕ್ಕೆ ನೀಡಿದ್ದಾರೆ. ಅದರಿಂದ ಹೆಚ್ಚು ಹೆಚ್ಚಾಗಿ ಪ್ರಯೋಜನ ಪಡೆಯಲು ಅಲ್ಲಾಹನು ನಮ್ಮನ್ನು ಅನುಗ್ರಹಿಸಲಿ. ಇಸ್ಲಾಮ್ ಧರ್ಮದ ಪತಾಕೆ ಎತ್ತಿ ಹಿಡಿದು ಕೊಂಡಿರುವುದಾಗಿ ಹೇಳುತ್ತಿರುವ ಈ ನಾಮಧಾರಿ ನೇತಾರರಿಗೂ ಅಲ್ಲಾಹನು ಬುದ್ಧಿ ನೀಡಲಿ. ಅವರು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಾಸ್ತವಿಕ ಪ್ರೇಮಿಯ ಮಾತುಗಳನ್ನು ಆಲಿಸುವವರಾಗಲಿ. ಮುಸ್ಲಿಮ್ ಜನತೆಗೆ ಸರಿಯಾಗಿ ಮಾರ್ಗದರ್ಶನ ನೀಡುವವರಾಗಲಿ – ಆಮೀನ್.

(ಖುತ್‌ಬದ ಕೊನೆಗೆ ಇಬ್ಬರು ಮೃತರಾದ ಬಗ್ಗೆ ಹುಝೂರ್ ಪ್ರಸ್ತಾಪಿಸಿದರು. ಮುಹಮ್ಮದ್ ಮೂಸಾ ಸಾಹೇಬ್ ದರ್‌ವೇಶ್ ಖಾದಿಯಾನ್ 2015 ಮೇ ದಿನಾಂಕ 10ರಂದು 95ನೆಯ ವಯಸ್ಸಿನಲ್ಲಿ ಖಾದಿಯಾನ್‌ನಲ್ಲಿ ಮೃತರಾದರು. ಇನ್ನಾಲಿಲ್ಲಾಹಿ ವಇನ್ನಾಇಲೈಹಿ ರಾಜಿಊನ್. ಸಾಹಿಬ್ ಝಾದೀ ಸಯ್ಯಿದ ಅಮತುರ್ರಫೀಖ್ ಸಾಹಿಬ 2015 ಮೇ ದಿನಾಂಕ 6ರಂದು ತನ್ನ 80ನೆಯ ವಯಸ್ಸಿನಲ್ಲಿ ರಬ್ವದಲ್ಲಿ ಮೃತರಾದರು. ಇನ್ನಾಲಿಲ್ಲಾಹಿ ವಇನ್ನಾಇಲೈಹಿ ರಾಜಿಊನ್. ಇವರಿಬ್ಬರ ಕುಟುಂಬದ ಬಗ್ಗೆ ಮತ್ತು ಅವರ ಸದ್ಗುಣಗಳ ಬಗ್ಗೆ ಪ್ರಸ್ತಾಪಿಸಿ ಅವರ ಮಗ್‌ಫಿರತ್ ಮತ್ತು ಉನ್ನತ ಪದವಿ ಲಭಿಸಲು ಪ್ರಾರ್ಥಿಸುವಂತೆ ಹುಝೂರ್ ಅಪೇಕ್ಷಿಸಿದರು.)

––––––––––––––*****–––––––––––––

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 15-05-2015.*

**Summarized by** *Majlis Ansarullah Bharat*

***Kannada Translation***: M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon